ಕವಲೇದುರ್ಗ, 4ನೇ ಅಕ್ಟೋಬರ್ 1876.		
ಶಿವಮೊಗ್ಗಾ, 16ನೇ „ „	}	ಹೆಚ್ಚು ಕಡಮೆ 200 ಟ್ಯಗಳ ವಜನಿ.
ಸಾಗರ, 25ನೇ „ „		
ಹುಣಸೂರು, 4ನೇ ನವಂಬರ್ 1876	}	ಹೆಚ್ಚು ಕಡಮೆ 560 ಟ್ಯಗಳ ವಜನಿ.
ಶ್ರೀರಂಗಪಟ್ಟಣ, 8ನೇ „ „		
ಬೆಂಗಳೂರು, 1ನೇ ಡಿಸಂಬರ್ „		ಹೆಚ್ಚು ಕಡಮೆ 100 ಟ್ಯಗಳು.
ಫ್ರೆಜರ್‌ಪೇಟೆ 18ನೇ „ „		80 „

ಹರಾಜ್‌ನಿಬಂಧನೆ—ಹರಾಜ್‌ಮೊಬಲಗ್ ಪೈಕೀ ಸೇಕಡಾ ಇಪ್ಪತ್ತೈದು ಪ್ರಕಾರ, ಹರಾಜ್ ತಾರೀಖು ಲಗಾಯತು ಮೂರುದಿನ ಗಳೊಳಗಾಗಿ ಪಾವತೀಮಾಡತಕ್ಕದ್ದು. ಬಾಕೀಮೊಬಲಗನ್ನು ಹರಾಜ್‌ತಾರೀಖುಮೊದಲು 90 ದಿನಗಳೊಳಗಾಗಿ ಪಾವತೀಮಾಡತಕ್ಕದ್ದು. ಇತರ ಷರತ್ತುಗಳೂ ದಂಡಗಳೂ 1874ನೇ ನವೆಂಬರ್ 28ನೇ ಮುಕ್ತಂ 47ನೇ ನಂಬರು ಮೈಸೂರು ಗಜೆಟ್‌ನಲ್ಲಿ ಕಾಣಬರುವದು. ಹರಾಜ್ ಆರಂಭವಾಗುವದಕ್ಕೆ ಮುಂಚಿತವಾಗಿ ಪ್ರತಿ ಕೋಠೀಬಳಿಯಲ್ಲೂ ಸದರೀ ನಿಬಂಧನೆಗಳು ಓದಲ್ಪಡುವವು. ಅಂತಾ ನಿಬಂಧನೆಗಳ ದೆಸೆಯಿಂದ ದರೋಬಸ್ತು ದರಖಾಸ್ತುದಾರರೂ ಬದ್ಧರಾಗತಕ್ಕದ್ದು.

ಷರಾ—ವರ್ತಕರ ಅನುಕೂಲಕ್ಕೋಸ್ಕರ ಹುಣಸೂರು ಶ್ರೀರಂಗಪಟ್ಣ ಈ ಉಭಯಸ್ಥಳಗಳ ಆಸ್‌ಪಾಸ್ ಕೋಠೀಗಳಲ್ಲಿ ಯ ಹರಾಜ್‌ಗಳು ನವಂಬರ್ 8ಕ್ಕೆ ಖೈದಾಗುವಂತೆ ನಡಿಸಲ್ಪಡುವದು. ಹುಣಸೂರು ಕೋಠೀಯಲ್ಲಿ ಕ್ರಯಮಾಡಲ್ಪಟ್ಟ ಮರಕ್ಕೆ ಕೊಡತಕ್ಕ ಸೇಕಡಾ ಇಪ್ಪತ್ತೈದು ಬಾಬತು ಡಿಪಾಜಿಟ್ ಮೊಬಲಗ್ ಸದರೀ ಮೇರೆ ಶ್ರೀರಂಗಪಟ್ಣ ಕೋಠೀಯಬಗೆ ಡಿಪಾಜಿಟ್ ಸಲ್ಲಬೇಕಾದಕಾಲಕ್ಕೆ ಸಮನಾಗಿ ಅಂದರೆ 1876ನೇ ನವಂಬರು 11ನೇ ಮುಕ್ತಂ ಸಾಯಂಕಾಲ 4 ಘಂಟೆಗೆ ಮುಂದಾಗಿಯೇ ಸಲ್ಲಬೇಕಾಗುತದೆ. ಸದರೀ ಉಭಯ ಹರಾಜ್‌ಗಳ ಬಾಬತು ಪೂರಾಮೊಬಲಗ್ 1877ನೇ ಇಸವೀ ಫೆಬ್ರವರಿ 6ನೇ ಮೆರ್ಕ್ಕಂ ಸಾಯಂಕಾಲ 4 ಘಂಟೆಗೆ ಮುಂದಾಗಿ ಸಲ್ಲಬೇಕಾಗುತ್ತೆ.

ವಿಕ್ರಯಿಸಲ್ಪಡುವ ದರೋಬಸ್ತು ಮರವೂ ವಿಕ್ರಯಿಸಲ್ಪಟ್ಟು, ಇದುವರಿಗೆ ನಡೆಯುತಿದ್ದ ಹಾಗೆ, ಖಂಡಿ, ಮಣ, ಶೇರು, ತೊಲೆ, ಪ್ರಕಾರ ತೂಕವಾಗುವದಕ್ಕೆ ಬದಲಾಗಿ ಬ್ರಿಟಿಸ್, ಪಾಂಡ್, ಹಂಡ್ರೆಡ್ ವೆಯಿಟ್ ಟ್ಯಗಳ ಮೇರೆ ತೂಕ ಮಾಡಿಕೊಡಲ್ಪಡುವದು.

G. J. VAN SOMEREN, *Captain,*
Conservator of Forests, Mysore & Coorg.

BANGALORE DISTRICT.

Notice of an application by Krishnasetti for a certificate under Act XXVII of 1860.

ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಕೋರ್ಟಿನಿಂದ.

ಸಕ್ರ 1876ನೇ ಇಸವಿ ಸಿವಿಲ್ ಮಿಸಲೇನಿಯಸ್ ನಂ. 72.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ, ಕಾರ್ಖಾನಹಳ್ಳಿ ಕಸಬೇಯಲ್ಲಿ ಯಿರುವ ಕಂತಿನ ಕೃಷ್ಣಶೆಟ್ಟಿ ಯಂಬುವನು ತನ್ನ ಅಂಣ ತಮ್ಮಂದಿರು ಸಂಜೀವಶೆಟ್ಟಿ ಹನುಮಯ್ಯನ ಲೇಣಿ 1000 ರೂಪಾಯಿ ಬರಮಾಡಿ ಕೊಳ್ಳತಕ್ಕಬಗ್ಗೆ ಸಕ್ರ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ 1876ನೇ ಇಸವಿ ಸಪ್ಟಂಬರ್ 29ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಆ ಮೊಬಲಗಿನಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿ ಕೊಡಬಹುದು.

Notice of an application by Narsumhaiya for a certificate under Act XXVII of 1860.

ಸಕ್ರ 1876ನೇ ಇಸವಿ ಸಿವಿಲ್ ಮಿಸಲೇನಿಯಸ್ ನಂಬರ್ 73.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ, ಬೆಂಗಳೂರು ಕಸಬೇಯಲ್ಲಿ ಇರುವ ತರಗಿನ ಮುಂಡೀ ನರಸುಹ್ಮಯ್ಯನು ತನ್ನ ತಂದೆ ನರಸಪ್ಪನ ಲೇಣಿ 1000 ರೂಪಾಯಿ ಬರಮಾಡಿ ಕೊಳ್ಳತಕ್ಕಬಗ್ಗೆ ಸಕ್ರ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ 1876ನೇ ಇಸವಿ ಅಕ್ಟೋಬರ್ 2ನೇ ತಾರೀಖು ದಿವಿ 11 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಸೆ ಆಗಲ್ಪಡುತ್ತೆಯಾಗಿ ಆ ಮೊಬಲಗಿನಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾ ತಮ್ಮ ಹಕ್ಕನ್ನ ಸ್ಥಾಪಿಸಿ ಕೊಡಬಹುದು.

ಬತಾರೀಖು 4ನೇ ಮಾಹೇ ಸಪ್ಟಂಬರ್ 1876ನೇ ಇಸವಿ—ಮೊಕ್ಕಾಂ ಬೆಂಗಳೂರು.

L. RICKETT
Offg. Dy.

KOLAR DISTRICT.

Notice of an application by Kaverammia for a certificate under Act XXVII of 1860.

ಕೋಲಾರ ಡಿಸ್ಟ್ರಿಕ್ಟ್ ಡೆ॥ ಕಮ್ಮಿಷನರವರ ಕೋರ್ಟಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಗುಮ್ಮನಾಯಕನಪಾಳ್ಯ ತಾಲ್ಲೂಕು ಬಾಗೇನಹಳ್ಳಿಲಿ ಯಿರುವ ತಿಪ್ಪಸ್ವಾಮಿಯ ಮಗ ವೆಂಕಟರಾಯಪ್ಪನ ಹೆಂಡತಿ ಕಾವೇರಮ್ಮ ನೆಂಬವಳು ಪಾತೀಪಟ್ಟ ತನ್ನ ಗಂಡನ ಹೆಸರಿನ ಲೇವಾದೇವಿ ವೊಬಲಗು 500 ರೂಪಾಯಿಗಳು ವಸೂಲ್ಮಾಡಿಕೊಳ್ಳತಕ್ಕಬಗ್ಗೆ ಸ॥ 1860ನೇ ಇಸವಿ 27ನೇ ಆಕ್ಟ್ಹು ಪ್ರಕಾರ ವಾರಸ್ ಸರ್ಟಿಫಿಕೇಟ್ ಕೊಡಿಸಬೇಕೆಂದು ಗುಜರಾಯಿಸಿದ ಅರ್ಜೀಯು ಸ॥ ಮು॥ ಅಕ್ಟೋಬರ್ 10ನೇ ವಾರ್ತ್ತಂನಲ್ಲಿ ವಿಚಾರಿಸಲ್ಪಡುತ್ತಾದ್ದರಿಂದ ಇದರಮೇಲೆ ಯಾರಿಗೆ ಯಾವ ವಿಧವಾದ ಬಾಧ್ಯತೆ ಯಿದ್ದಾಗ್ಯೂ ಅಂತವರೆಲ್ಲ ಆ ತಾರೀಖು ದಿವಿ 11 ಘಂಟೆಗೆ ಕೋರ್ಟು ಇರುವ ಸ್ಥಳಕ್ಕೆ ಹಾಜರಾಗಿ ತಿಳಸತಕ್ಕದ್ದಾಗಿರುತ್ತೆ.

ತಾರೀಖು 29ನೇ ಆಗಸ್ಟ್ 1876ನೇ ಯಿಸವಿ ವೊಕ್ತಾಂ ಕೋಲಾರ.

J. LACEY,
For Dy. Commr.

TUMKUR DISTRICT.

Notice of an application by Mallakka for a certificate under Act XXVII of 1860.

ತುಮಕೂರು ಡಿ॥ ಜೆ॥ ಕಮ್ಮಿಷನರವರ ಕೋರ್ಟಿನಿಂದ.

ಸ॥ 187—ನೇ ಇಸವೀ ಸಿವಿಲ್ ಮಿಸಲೇನಿಯಸ್ ಕೇಸ್ ನಂ॥ 21.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧಪಡಿಸುವದೇನಂದರೆ,—ಕೊರ್ಟಗೆರೇ ತಾಲ್ಲೂಕ್ ರಾಂಪುರದ ಗ್ರಾಮದ ವಾಸಸ್ಥನಾಗಿಯಿದ್ದ ಪಾತಿಯಾದ ನಾಗಪ್ಪ ಯಂಬುವನಿಗೆ ಇತರರಯಿಂದ ಬರಬೇ ಇರುವ 1000 ರೂಪಾಯಿಗಳು, ವಸೂಲು ಮಾಡಿ ಕೊಳ್ಳುವದಕ್ಕೆ 1860ನೇ ಇಸವೀ 27ನೇ ಆಕ್ಟ್ಪ್ರಕಾರ ಸರಟಫಿಕೇಟ್ ಅಪೇಕ್ಷಿಸಿ, ಇವನ ಹೆಂಡತಿ ಚನ್ನಮ್ಮ ಮೈನರ್ ಸಬಬ್ ಇವಳ ಪೋಷಕಳಾದ ವರ್ತಿಹಳ್ಳಿ ಮಲ್ಲಕ್ಕ ಯಂಬುವಳು ದಾಖಲ್ ಮಾಡಿ ಇರುವ ಅರ್ಜೀಯನ್ನು 187 ನೇ ಇಸವೀ ಅಕ್ಟೋಬರ್ ತಿಂಗಳು 2ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ ಇದಕ್ಕೆ ತಕರಾರ್ ಮಾಡುವರ್ಯಾರಾದರೂ ಇದ್ದರೆ, ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 10 ಘಂಟೆಗೆ ಹಾಜರಾಗಬೇಕಾಗಿ ಇರುತ್ತೆ.

ತಾರೀಖು 2ನೇ ಮಾಹೇ ಸಪ್ಟಂಬರ್ 1876ನೇ ಇಸವೀ ವೊಕ್ತಾಂ ತುಮಕೂರ್.

T. E. WOODCOCK,
Offg. Dy. Commr.

MYSORE DISTRICT.

Notice of an application by Vire Gauda for a certificate under Act XXVII of 1860.

ಮೈಸೂರು ಡಿ॥ ಜೆ॥ ಕಮ್ಮಿಷನರವರ ಕೋರ್ಟಿನಿಂದ.

ಸ॥ 1876ನೇ ಇಸವಿ ಸಿವಿಲ್ ಸೂಟ್ ಮಿಸಲೇನಿಯಸ್ ನಂಬರ್ 61.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಪಾತೀಯಾದ ತನ್ನ ತಂದೆ ಚನ್ನವೀರದೇವರಿಗೆ ಬರಬೇಕಾದ 200 ರೂಪಾಯಿ ಸಾಲಗಳನ್ನು ವಸೂಲ್ ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ಸರಟಫಿಕೇಟ್ ಆಗಬೇಕೆಂದು ಚಾಮರಾಜನಗರ ತಾಲ್ಲೂಕು ಪೈಕೀ ಗೋಪೀಪುರದ ಗ್ರಾಮದಲ್ಲಿರುವ ವೀರೇಗೌಡನು ಕೊಟ್ಟಿರತಕ್ಕ ಅರ್ಜಿಯನ್ನು ಸೆಪ್ಟಂ ತಾರೀಖು 19ರಲ್ಲಿ ಹಿಯರಿಂಗ್ ಮಾಡುವದ್ಕಂಡ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

Notice of an application by Venkat Rao for a certificate under Act XXVII of 1860.

1876ನೇ ಇಸವಿ ಸಿವಿಲ್ ಸೂಟ್ ಮಿಸಲೇನಿಯಸ್ ನಂಬರ್ 62.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಪಾತೀಯಾದ ತನ್ನ ತಂದೆ ಓವರಸೀಯರ್ ಶ್ರೀನಿವಾಸರಾಯ ನಿಂಬುವನಿಗೆ ಬರಬೇಕಾದ 100 ರೂಪಾಯಿ ಅದರ ಬಡ್ಡಿ ಸಹ ವಸೂಲ್ ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ಸರಟಿಫಿಕೇಟ್ ಆಗಬೇಕೆಂದು ಮೈಸೂರು ಹೊಸಅಗ್ರಹಾರದಲ್ಲಿರುವ ವೆಂಕಟರಾವ್ ಯಂಬುವನು ಕೊಟ್ಟರತಕ್ಕ ಅರ್ಜೀಯನ್ನು ಸೆಪಟಂಬರ್ ಮಾಹೇ ತಾರೀಖು 19ರಲ್ಲಿ ಹಿಯರಿಂಗ್ ಮಾಡುತ್ತೆಯಾಗಿ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನ ಸ್ಥಿರಪಡಿಸಿ ಕೊಳ್ಳತಕ್ಕದ್ದಿದೆ.

Notice of an application by Ramachari for a certificate under Act XXVII of 1860.

1876ನೇ ಇಸವಿ ಸಿವಿಲ್ ಸೂಟ್ ಮಿಸಲೇನಿಯಸ್ ನಂಬರ್ 63.

ಇದರಿಂದ ಸಮಸ್ತ ಜನಗಳಿಗೂ, ತಿಳಿಯಪಡಿಸುವದೇನಂದರೆ,—ಪಾತೀಯಾದ ತನ್ನ ತಂದೆ ಮಾನೋಡೀ ಶ್ರೀನಿವಾಸಾಚಾರಿಗೆ ಬರಬೇಕಾದ 1250 ರೂಪಾಯಿಗಳನ್ನು ವಸೂಲ್ ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ವಾರಸ್ ಸರಟಿಫಿಕೇಟ್ ಆಗಬೇಕೆಂದು ಮೈಸೂರು ತತ್ತವಾಡೀಪುರದ ಅಗ್ರಹಾರದಲ್ಲಿ ಯಿರುವ ಮಾನೋಡೀ ರಾಮಾಚಾರೀ ಯೆಂಬುವನು ಕೊಟ್ಟರತಕ್ಕ ಅರ್ಜೀಯನ್ನು ಸೆಪ್ಟಂಬರ್ ತಾರೀಖು 19ರಲ್ಲಿ ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರ ತಕರಾರನ್ನು ಸ್ಥಿರಪಡಿಸಿ ಕೊಳ್ಳತಕ್ಕದ್ದಿದೆ.

ತಾರೀಖು 18ನೇ ಆಗಸ್ಟು 1876ನೇ ಇಸವಿ ಮೊಕ್ತಾಂ ಮೈಸೂರು.

Notice of an application by Gopalaiengar for a certificate under Act XXVII of 1860.

ಸ್ರ 1876ನೇ ಇಸವಿ ಸಿವಿಲ್ ಮಿಸಲೆನಿಯಸ್ ನಂಬರ್ 64.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ,—ಪಾತಿಯಾದ ಕುಪ್ಪನೈಯ್ಯಂಗಾರ್ ಕೃಷ್ಣಯ್ಯಂಗಾರ್ರಿಗೆ ಬರಬೇಕಾದ 500 ಐನೂರು ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ಪ್ರಕಾರ ಸರಟಿಫಿಕೇಟ್ ಆಗಬೇಕೆಂದು ಯಡತೊರೆ ತಾಲ್ಲೂಕು ತಿಪ್ಪೂರ್ ಸ್ಥಳದಲ್ಲಿ ಇರುವ ಡಿಟೋ ಕುಪ್ಪನೈಯ್ಯಂಗಾರ್ ಕೃಷ್ಣಯ್ಯಂಗಾರು) ಸ್ವೀಕೃತ ಮಗ ಶ್ರೀನಿವಾಸ ನರಸುಂಹನ ಪೋಷಕ ಗೋಪಾಲೈಯ್ಯಂಗಾರು) ಯಂಬುವನು ಕೊಟ್ಟು ಇರತಕ್ಕ ಅರ್ಜಿಯನ್ನು ಕಪ್ಟಂಬರು ತಿಂಗಳು 28ನೇ ತಾರೀಖು ದಿವಿ 11 ಗಂಟೆಗೆ ಹಿಯರಿಂಗ್ ಮಾಡುವದ್ದರಿಂದ ಇದರ ಮೇಲೆ ತಕರಾರು ವುಳ್ಳವರು ಆತಾರೀಖುದಿವಿ 11 ಗಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದಿದೆ.

Notice of an application by Srinivasachar for a certificate under Act XXVII of 1860.

ಸ್ರ 1876ನೇ ಇಸವಿ ಸಿವಿಲ್ಮಿಸಲೆನಿಯಸ್ ನಂಬರ್ 65.

ಇದರಿಂದ ಸವ.ಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ,—ಘಾತಿಯಾದ ತನ್ನ ತಂದೆ ವೆಂಕಟ್ಟಾಯಾಚಾರಿಗೆ ಬರಬೇಕಾದ (300) ಮುನ್ನೂರು ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ಸರಟಿಫಿಕೇಟ್ ಆಗಬೇಕೆಂದು ನಂಜನಗೂಡು ಕಸಬಾ ಸ್ಥಳದಲ್ಲಿ ಇರುವ ಶ್ರೀನಿವಾಸಾಚಾರೀ ಯಂಬುವನು ಕೊಟ್ಟು ಇರತಕ್ಕ ಅರ್ಜಿಯನ್ನಾ ಸೆಪ್ಟಂಬರ್ ತಿಂಗಳು 28ನೇ ತಾರೀಖು ದಿವಿ 11 ಘಂಟೆಗೆ ಹಿಯರಿಂಗ್ ಮಾಡುವದ್ದರಿಂದ ಇದರಮೇಲೆ ತಕರಾರ್ ವುಳ್ಳವರು ಆತಾರೀಖುದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರವರ ತಕರಾರನ್ನ ಸ್ಥಿರಪಡಿಸಿ ಕೊಳ್ಳತಕ್ಕದಿದೆ.

Notice of an application by Bettalinge gauda for a certificate under Act XXVII of 1860.

ಸ್ರ 1876ನೇ ಇಸವೀ ಸಿವಿಲ್ ಮಿಸಲೆನಿಯಸ್ ನಂಬರ್ 66.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ,—ಪಾತೀಯಾದ ತನ್ನ ತಮ್ಮ ಚಟ್ಟಚನ್ನೆ ಗೌಡನಿಗೆ ಬರಬೇಕಾದ (400) ರೂಪಾಯಿಗಳನ್ನಾ ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವೀ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಆಗಬೇಕೆಂದು ಗುಂಡ್ಲು ಕಸಬಾ ಸ್ಥಳದಲ್ಲಿಯಿರುವ ಡಿಟೋ ಚನ್ನೇಗೌಡನ ಅಣ್ಣ ಬೆಟ್ಟ ಲಿಂಗೇಗೌಡ ನೆಂಬುವನು ಕೊಟ್ಟುಯಿರತಕ್ಕ ಅರ್ಜೀಯನ್ನು ಸೆಪ್ಟಂಬರ್ ತಿಂಗಳು 28ನೇ ತಾರೀಖು ದಿವಿ 11 ಘಂಟೆಗೆ ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ

ತಕರಾರ್ ವುಳ್ಳವರು ಆ ತಾರೀಖು ಬವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂಬ್ ಹಾಜರಾಗಿ ಅವರವರ ತಕರಾರನ್ನು ಸ್ಥಿರಪಡಿಸಿ ಕೊಳ್ಳತಕ್ಕದ್ದಿದೆ

ತಾರೀಖು ನೇ ಮಾಹೇ ಸೆಪ್ಟಂಬರ್ ಸ್ ಸ್ 1876ನೇ ಇಸವೀ ಮೊಕ್ಕಾಂ ಮೈಸೂರು.

E. C. SHANMUGAVELU PILLE,
For Dy. Commr.

HASSAN DISTRICT.

Notice of an application by Ranganna for a certificate under Act XXVII of 1860.

ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಕೋರ್ಟಿನಿಂದ.

ಇದರಿಂದ ತಿಳಿಯಪಡಿಸುವದೇನಂದರೆ, ಮಂಜರಾಬಾದ್ ತಾಲ್ಲೂಕು ಸಕಲೇಶಪುರದಲ್ಲಿಯಿರುವ ಬೈಕೆರೆ ಶಾನುಭೂಗ ಪುಟ್ಟಯ್ಯನ ಮಗ ರಂಗಂಣ ನೆಂಬವನು ಪಾತೀಆದ ತನ್ನ ತಂದೆ ಪುಟ್ಟೈನ ಸಾಲ 300 ರೂಪಾಯಿ ವಸೂಲ್ಮಾಡಿಕ್ಕೊಳ್ಳುವದಕ್ಕೆ 60ನೇ ಇಸವಿ 27ನೇ ಆಕ್ಟು ಮೇರೆ ಸರ್ಟಿಫಿಕೇಟ್ ಕೊಡಿಸಬೇಕೆಂತ ಕೊಟ್ಟ ಅರ್ಜೀ ಫೈಸಲ್‌ಬಗ್ಯೆ ಸ್ ಸ ಮಜಕೂರು ಕಪ್ಟಂಬರ್ 25ನೇ ತಾರೀಖನ್ನು ನಿಷ್ಕರ್ಷೆ ಮಾಡಿ ಇರುವದರಿಂದ ತಕರಾರು ಇರತಕ್ಕವರೆಲ್ಲ ಮೇಲೆ ಕಂಡ ತಾರೀಖು ಹಗಲು 10 ಘಂಟೆಗೆ ಕೋರ್ಟು ಇದ್ದ ಮೊಕ್ಕಾಮಿಗೆ ರೂಬರೂ ಹಾಜರಾಗಿ ಜಾಹಿರ್ ಮಾಡಿಕ್ಕೊಳ್ಳತಕ್ಕದ್ದಿದೆ.

ತಾರೀಖು 25ನೇ—8—76.

H. E. MOTTET,
Dy. Commr.

KADUR DISTRICT.

Notice to one Mohadin Saib to receive back a document presented by him for registration in the Sub-Registrar's Office, Chikmagalur.

ಕಡೂರು ಡಿಸ್ಟ್ರಿಕ್ಟ್ ರಿಜಿಸ್ಟ್ರಾರವರ ಆಫಿಸಿನಿಂದ.

ವಸ್ತಾರಾ ತಾಲ್ಲೂಕು ದಫೇದಾರ್ ನೆಲವಂಗಲದ ಶೇಕ್ ಇಮಾಮ್ ಸಾಬನು ಅತ್ತಿಗುಂಡಿಯಲ್ಲಿ ಯಿರುವ ಜಫರ್‌ದಾರ್, ಶಿಲೆರ್ಮಾಖಾ ಸಾಬನ ಮಗ ಖಾಜಾ ಚಂದೆ ಮಹತಾಬ್‌ಖಾ ಸಾಹೆಬಗೆ ತನ್ನ ಬಾಬತು ಚಿಕ್ಕಮುಗಳೂರ್ ಕಸಬಾ ದೊಡ್ಡ ಮಸಜೀದಿ ಪೂರ್ವ ದಿಕ್ಕಿನಲ್ಲಿ ಯಿರುವ ಮೂರು ಅಂಕಣದ ಹೆಂಚಿನ ಮನೆ ಮತ್ತು ಇದಕ್ಕೆ ಸೇರಿದ ನಿವೇಶನವನ್ನು ಸಹ 150 ರೂಪಾಯಿ ಗೆಗೆ ಶುದ್ಧ ಖರೀದಿಗೆ ಕೊಟ್ಟು ಸ್ ಸ 1874ನೇ ಇಸವಿ ಫೆಬ್ರವರೀ ತಾರೀಖು 19ರಲ್ಲಿ ಬರಕೊಟ್ಟ ದಸ್ತೈವಜು ಸ್ ಸ 1874ನೇ ಇಸವಿ ಮೇ ತಾರೀಖು 21ರಲ್ಲು ಸದರೀ ಖಾಜಾ ಚಂದೆ ಮಹತಾಬ್‌ಖಾ ಸಾಬನ ಮೊಖ್ತಾರ್ಯರ್ ಅಂಬೂರ್ ಮೋದೀರ್ ಸಾಬ್ ಎಂಬವನಿಂದ ಚಿಕ್ಕಮುಗಳೂರು ಸಬ್ ರಿಜಿಸ್ಟ್ರಾರ ಮುಂದೆ ರಿಜಿಸ್ಟ್ರೇಷ್ಟ ಬಗ್ಗೆ ಹಾಜರಾದ್ದು ಆ ಆಫಿಸ್ ಸ್ ಸ 1874—75ನೇ ಇಸವಿ 1ನೇ ಬುಕ್ಕು ನಂಬರ್ 50ಕ್ಕೆ ರಿಜಿಸ್ಟರ್ ಮಾಡಲ್ಪಟ್ಟು ಸದರೀ ಆಫಿಸಿನಲ್ಲಿ ಅಮಾನತ್ತು ಯಿರುತ್ತದೆ. ಸದರೀ ದಸ್ತೈವಜು ವಾಪಸ್ ಪಡೆಯತಕ್ಕ ಬಗ್ಗೆ ವಾಯಿದೆನಿಶೀ ಸದರೀ ಮೋದೀರ್ ಸಾಬಗೆ ನೋಟಿಸ್ ಜಾರೀಆಗಿ ಬಹಳ ದಿವಸ ವಾದಾಗ್ಯೂ ಅದ್ಯಾಪಿ ಹಾಜರಾಗದೆ 3 ವರುಷದ ಕಾಲ ಕಳದು ಯಿರುವಂತ ಚಿಕ್ಕಮುಗಳೂರು ಸಬ್ ರಿಜಿಸ್ಟ್ರಾರ್ ಮಾಹೇ ಮಜಕೂರ್ 12ನೇ ವರ್ಕ್ಷಂ ನಂಬರ್ 99ನೇ ಯಿತ್ತಿಲ್ಲೆ ತಲ್ಪಿ ಯಿರುವದ್ದರಿಂದ ಸದರೀ ತಮಸೂಕಿನಲ್ಲಿ ಕಂಡ ಖಾಜಾ ಚಂದೆ ಮಹತಾಬ್ ಖಾನನ ಮೊಖ್ತಾರ್ಯರ ಸದರೀ ಮೋದೀರ್ ಸಾಬನೇ ಆಗಲಿ ಯಿಲ್ಲವೆ ಯಿವನಿಂದ ಕ್ರಮಪ್ರಕಾರ ಅಧಿಕಾರ ಹೊಂದಿದ ಬೇರೇ ಮುತಾಲೀಕನೇ ಆಗಲಿ, ಈ ತಾರೀಖು ಲಗಾಯತು 3 ತಿಂಗಳ ವಳಗೆ ಚಿಕ್ಕಮುಗಳೂರು ಸಬ್ ರಿಜಿಸ್ಟ್ರಾರ ಮುಂದೆ ಪುರೂ ಕೊಡಲ್ಪಟ್ಟ ರಶೀದೀನಿಶೀ ಹಾಜರಾಗಿ ಐರ್ಜ ದಸ್ತೈವಜು ವಾಪಸ್ ಪಡೆಯಬೇಕು. ಆಮೇರೆ ತೆಗದುಕೊಳ್ಳದಿದ್ದರೆ ರಿಜಿಸ್ಟ್ರೇಷ್ಟ ಆಕ್ಟು 83ನೇ ಸೆಕ್ಷಷ್ಟ ಅನುಸರಿಸಿ ಸದರೀ ತಮಸೂಕನ್ನು ನಾಶ ಪಡಿಸಲಾಧೀತು ವಾಯಿದೇ ಅನಂತರ ಬರುವ ಫಿರ್ಯಾದು ಅಂಗೀಕರಿಸೋಣಾಗಲಿಕ್ಕೆ ಯಿಲ್ಲ.

ತಾರೀಖು 24ನೇ ಆಗಸ್ಟು ಸ್ ಸ 1876ನೇ ಇಸವಿ ಮೊಕ್ಕಾಂ ಚಿಕ್ಕಮುಗಳೂರ್.

P. KRISHNA RAO,
Registrar.

Notice of an application by Dasanna for a certificate under Act XXVII of 1860.

ಕಡೂರು ಡಿ॥ ಡೆ॥ ಕಮ್ಮಿಷನರವರ ಕೋರ್ಟಿನಿಂದ.

ಇದರಿಂದ ಸಮಸ್ತ ಜನರಿಗೂ ಪ್ರಸಿದ್ಧ ಪಡಿಸುವದೇನಂದರೆ, ಬಾಣಾವಾರ ತಾಲ್ಲೂಕು ವಕ್ಕಲಗೆರಿ ಮಾಗಣೀ ಹಂಜೀಹಳ್ಳಿ ಗ್ರಾಮದ ವಾಸಸ್ಥ ಕುರಬರ ಕಾರೆಹಳ್ಳಿ ಮಂಗಜ್ಜನಮಗ ದಾಸಂಣನು ಘಾತೀ ಪಟ್ಟು ತನ್ನ ತಂದೆ ಮಂಗಜ್ಜನ ಹೆಸರಿನಲ್ಲಿ ಇರತಕ್ಕ ತಮಸೂಕುಗಳ ಮೊಬಲಗು 500 ರೂಪಾಯಿ ವಸೂಲ್ಮಾಡಿಕ್ಕೊಳ್ಳತಕ್ಕಬಗ್ಗೆ ಸ೯ 1860ನೇ ಇಸವಿ 27ನೇ ಆಕ್ಟು ಪ್ರಕಾರ ತನ್ನ ಹೆಸರಿಗೆ ಸರ್ಟಿಫಿಕೇಟ್ ಕೊಡಿಸಬೇಕೆಂತ ಈ ಕೋರ್ಟಿಗೆ ದಾಖಲ್ಮಾಡಿರುವ ಅರ್ಜಿಯನ್ನು ಫೈನಲ್ಬಗ್ಗೆ ಬರುವ ಅಕ್ಟೋಬರ್ ತಿಂಗಳ 11ನೇ ತಾರೀಖಿನ ದಿವಸ ನಿಶ್ಚಯಿಸಿ ಯಿರುವದರಿಂದ ಈಬಗ್ಗೆ ತಕರಾರು ವುಳ್ಳವರು ಆ ತಾರೀಖು ಹಗಲು 11 ಘಂಟೆಗೆ ಈ ಕೋರ್ಟು ರೂಬರೂ ಹಾಜರಾಗಿ ಜಾಹಿರ್ಮಾಡಿಕ್ಕೊಳ್ಳತಕ್ಕದ್ದು.

ಬತಾರೀಖು 9ನೇ ಶಪ್ಟಂಬರ್ ಸ೯ 1876 ಮೊಕ್ಕಾಂ ಚಿಕ್ಕವುಗಳೂರು.

P. KRISHNA RAO,
Dy. Commr.

CHITALDROOG DISTRICT.

ಚಿತ್ರದುರ್ಗ ಡಿಸ್ಟ್ರಿಕ್ಟು.

ಇದರಿಂದ ತಿಳಿಸಲ್ಪಡುವದೇನಂದರೆ—ಇದರಡಿ ವಿವರಿಸಿ ಇಹುವ ಕದರಿಗನೆಂಬ ಆಸಾಮಿ ಪಟೇಲ್ ಸಿದ್ದಣ್ಣನೆಂಬವನ ನವ್ಹು ಕರಿಯಲ್ಲಿದ್ದು 1875ನೇ ಇಸವಿ ಡಿಸಂಬರು 11ನೇ ತಾರೀಕ್ 49 ನಂಬರ್ ಮೈಸೂರುಗೆಜೆಟ್ 702ನೇ ಪುಟದಲ್ಲಿ ಘಾಯಿಷಾದ ಪಟ್ಟಿಯಲ್ಲಿ ನಮೂದಿರುವ ಸ್ವತ್ತು ಸಹಿತ ಪರಾರೀಯಾದಂತೆ ತಿಳಿಸಲ್ಪಟ್ಟಸಬಬ್ ಅವನದಸ್ತಗಿರೀಗೆ ಅನುಕೂಲಿಸುವ ಸಂಗತಿಯನ್ನು ತಿಳಿಸುವಂತಾವರಿಗೆ 100 ರೂಪಾಯಿಗಳ ಇನಾಂ ಕೊಡಲ್ಪಡುತ್ತೆಂತ ಪಾವಗಡತಾಲ್ಲೂಕು ಅಚ್ಚವ್ಮನಹಳ್ಳಿ ಜೋಡೀದಾರ ತಿರುಮಲ ರಾವ್ ಬರ್ಯಾವಮಾಡುತ್ತಾರೆ. ಮತ್ತು ಪತ್ತೇಯಾದ ಮಾಲ್ಪೈಕೀ ಸಾವಿರಕ್ಕೆ 25 ರೂಪಾಯಿಗಳ ವೀರಯೂ ಇನಾಂಕೊಡುವಂತೆ ಬರ್ಯಾವಮಾಡುತ್ತಾರೆ.

ಕದರಿಗನ ಜಹರೀ ಪಟ್ಟೀ.

ವಯಸ್ಸು—ಪುಮಾರ್ 30 ವರುಷಗಳು ಎತ್ತರ 5 ಅಡಿ 4 ಅಂಗುಲ; ಉದ್ದಮುಖ, ಕಿಡುಬಿನಕಲೆಗಳಿವೆ, ಉದ್ದವಾದಮೀಸೇ ಬಿಟ್ಟಿದ್ದಾನೆ, ಹೊಕ್ಕಳಕೆಳಭಾಗಕ್ಕೆ ಚುಟ್ಟಿಕೇಗುರುತು; ವಾಸಸ್ಥಳ ಬಳ್ಳಾರೀಡಿಸ್ಟ್ರಿಕ್ಟ್ ತಾಡಪತ್ರಿತಾಲ್ಲೂಕು ಚಾಗಲ್ಎಂಬ ಸ್ಥಳ.

ABDUL RAHIMAN,
For Dy. Commr.

ಚಿತ್ರದುರ್ಗ ಡಿಸ್ಟ್ರಿಕ್ಟು.

ಜುಡಿಷಲ್ ಅಸಿಸ್ಟೆಂಟ್ ಕಮ್ಮಿಷನರವರ ಕೋರ್ಟು.

ತಾರೀಖು 8ನೇ ಶಪ್ಟಂಬರ್ 1876.

ಇದರಿಂದ ತಿಳಿಸುವದೇನಂದರೆ,—ಹಳ್ಳೇ ಜುಡಿಷಲ್ ರಿಕಾರ್ಡ್ಗಳನ್ನು ನಾಶಪಡಿಸುವ ಬಗ್ಗೆ ಹುಟ್ಟಿದ ರೂಲ್ಸು ಅನುಸರಿಸಿ, ಕಕ್ಷಿಗಾರ್ರಿಂದ ಈ ಕೋರ್ಟಿನೊಳಗೆ ಅರಿಜನಲ್, ಸ್ಮಾಲ್ಕಾಜ್ ಮೊಕದ್ದಮೆಗಳಲ್ಲಿ ಅಮಲ್ಜಾರೀ ಮತ್ತು ಇತರ ಚಿಲ್ಲರೆ ಮೊಕದ್ದಮೆಗಳಲ್ಲಿ ವ ಪ್ರೊಸೀಡಿಂಗ್ಸಿನೊಳಗೆ 1870ನೇ ಜನವರೀ ಮೊದಲು 1870ನೇ ಡಿಸಂಬರ್ 31ನೇ ಮುಕ್ತಾಂ ವರಿಗೆ ದಾಖಲಾದ ದರೋಬಸ್ತು ದಸ್ತಾವೇಜುಗಳು ಎಗ್ಜಿಬಿಟ್ಗಳು, ಲೆಕ್ಕಗಳು ಯಿತರ ಕಾಗದ ಪತ್ರಗಳು ಯಿವು 1876ನೇ ಡಿಸಂಬರ್ 30ರಲ್ಲು ನಾಶಪಡಿಸಲ್ಪಡುತ್ತೆ.

ಸದರೀ ಮೊಕದ್ದಮೆಗಳಿಗೆ ವ ಪ್ರೊಸೀಡಿಂಗ್ಸಿಗೆ ಸಂಬಂಧಿಸಿ ಮೊಬಲಗಿನ ಬಾಬತು ಯಾವ ದಸ್ತಾವೇಜುಗಳನ್ನಾಗಲಿ ವಾಪಸ್ ಪಡೆಯುವ ಖಾಯಿಷ್ ಉಳ್ಳ ಕಕ್ಷಿಗಾರರು ಸದರೀ ತಾರೀಖಿಗೆ ಮುಂಚಿತವಾಗಿ ಕೋರ್ಟು ಆಗುವ ದಿನಗಳಲ್ಲಿ ಮಧ್ಯಾನ್ಹಾ ೨ರ 1ಘಂಟೆಯ ಮೊದಲು 4 ಘಂಟೆಯ ವರಿಗೆ ಕೋರ್ಟು ಶಿರಸ್ತೇದಾರರಲ್ಲಿ ದರಖಾಸ್ತು ಮಾಡತಕ್ಕದ್ದು.

S. VENKAT VARDAIENGAR,
Judicial Asstt. Commr.

COORG.

ಕೊಡಗು ಸೂಪರ್ಿಟೆಂಡೆಂಟ್ ಕಚ್ಚೇರಿಯಿಂದ.

ಅಕ್ರಮ ಸ್ತ್ರೀಸಂಗ ಮಾಡಿದ ತಪ್ಪು ಹೊರಿಸಲ್ಪಟ್ಟು ಪರಾರೀಯಾದ ಅಮ್ಮತ್ತ್ನಾಡ್ ತಾಲ್ಲೂಕು ಅತ್ತೂರುಗ್ರಾಮದ ಪೂವಯ್ಯನ ಮಗ ಕೊಕ್ಕಂಡ ಪೊನ್ನಪ್ಪ ನೆಂಬವನು ಪತ್ತೇಯಾಗುವ ಬಗ್ಯ್ಯೂ, ತಕ್ಷೀರ್ ಸ್ಥಾಪನೇ ಬಗ್ಯ್ಯೂ ಅನುಕೂಲಿಸತಕ್ಕ ಸಂಗತೀ ತಿಳಿಸುವವರಿಗೆ 150 ರೂಪಾಯಿಗಳು ಇನಾಂ ಕೊಡಲ್ಪಡುತ್ತೆ. ತಕ್ಷೀರ್ ವಂದನ ಜಹರೇಪಟ್ಟ್ಯ.

ತಕ್ಷೀರ್ ವಂದನ ಹೆಸರು—ಪೂವಯ್ಯನಮಗ ಕೊಕ್ಕಂಡ ಪೊನ್ನಪ್ಪ—ಜಾತಿ ಕೊಡಗಿನವ—ವಯಸ್ಸು ಮೂವತ್ತುವ ರುಷಗಳು—ತಕ್ಷೀರ್ ಇಂಡಿಯ್ಯ ಪೆನಲ್‌ಕೋಡ್ 376ನೇ ಸೆಕ್ಷರ್ ಪ್ರಕಾರ—ಎತ್ತರ 5 ಅಡಿಗಳು.

ತಪಸೀಲ್—ಶಾಮಲವರ್ಣ, ದುಂಡುಮೋರೆ ದಪ್ಪತರದ ಆಳು, ಸಣ್ಣ ಮೀಸೆ, ಮಾತಿನಲ್ಲಿ ನತ್ತಿ ಇದೆ. ಕುಡಿಮಿ ಯಿಟ್ಟುರುತ್ತಾನೆ, ರುದ್ರಾಕ್ಷೀ ಸರ ಹಾಕಿದ್ದಾನೆ, ಹತ್ತು ಕಡಕು ಹಾಕಿದ್ದಾನೆ.

ಸಮಸ್ತ ಜನರಿಗೂ ಪ್ರಕಟಿಸುವದೇನಂದರೆ,—ಕಾಫೀಸಾಗುವ್ಯೇಗೆ ಪಡಕೊಂಡಿದ್ದ ರೈತರು ಕೆಳಗೆ ಬರದ ಇಲಾಚೀ ಮಲೆಗಳ ಸರ್ವೇ ಜಾಜ್ ಈಕಂಭರ್ತೀ ವಗೈರೆ ಕೊಡಲಾರದೆಂದು ಹೇಳುವದ್ಕಂದ ಈ ಮಲೆಗಳಲ್ಲಿ ಸ್ರ 1876—77ನೇ ಸರಕಾರ ಕೋನ್ಕರ ಉತ್ಪತ್ತಿ ಆಗಿರುವ ಫಸಲನ್ನು ಬರುವ ಸೆಪ್ಟಂಬರ್ ತಾರೀಖು 18ನೇ ದಿನ ಪಾಡಿನಾಲ್ಕ್ನಾಡು ತಾಲೂಕು ಕಚ್ಚೇರಿಯಲ್ಲಿ ಹರಾಜು ಹಾಕಲ್ಪಡುತ್ತೆ ಆಪೇಕ್ಷೆಉಳ್ಳವರು ಹಾಜರಾಗಿ ಜಡ್ ದರಖಾಸ್ತಿನಿಂದ ಪಡಕೊಳ್ಳ ಬಹುದು. ಮತ್ತು ಹರಾಜಿನ ಮೊಬಲಗನ್ನು ಸ್ರ 1877ನೇ ಇಸವಿ ಜನವರೀ ಮೂಹೇ ಆಖೈರ್ ವಳಗೆ ಸಾಕಲ್ಯವಾಗಿ ಪಾವತೀ ಮಾಡಬೇಕು ಮಲೆಗಳ ವಿವರ.

ನಂಬರ್.	ತಾಲ್ಲೂಕು.	ನಾಡು.	ಗ್ರಾಮ.	ತೋಟ.	ತೋಟಗಾರನಹೆಸರು.	ಏಕರಾ.
4168	ಪಾಡಿನಾಲ್ಕ್ನಾಡು ತಾಲ್ಲೂಕು.	ಪಾಡಿನಾಲ್ಕ್ನಾಡು	ಯವ್ವಕಪಾಡಿ	ಕಂಗುಮಲೆ ತುಂಡು	ಅಪ್ಪರಂಡ್ರಮಂಡಂಣ	11· 6
4030	ಡಿಟೋ	ಡಿಟೋ	ಡಿಟೋ	ಪಂಗಾರಮಲೆತುಂಡು	ಡಿಟೋ	3·28
3664	ಡಿಟೋ	ಡಿಟೋ	ಪುಲಿಕೋಟು	ಬೆಂಗಳೂರೆ ಮಲೆ	ಮುಕ್ಕಾಟಿಜಯ್ಯಪ್ಪ	1732·65
4112	ಡಿಟೋ	ತವನಾಡು	ಕರಿಕೆ	ಪಡುವಳದ ಮಲೆ	ಕಬ್ಬಿನ ಹಿಪ್ಲು ಕಂಪ್ರ ಭಟ್ಟ್ಯ	852·94
4084	ಡಿಟೋ	ಡಿಟೋ	ಡಿಟೋ	ಮೊಣಂಡ ಮಲೆ	ಸ್ವಾ॥ ವೆಂಕಟೇಶಯ್ಯ	763·58
4070	ಡಿಟೋ	ಡಿಟೋ	ಪೇರಜೆ	ನಿಡಿಯ ಮಲೆ	ನಿಡ್ಯಮಲೆ ಕೃಷ್ಣಪ್ಪ	676·87
2060	ಡಿಟೋ	ಡಿಟೋ	ಚರಂಗಾಲ್	ಬಲ್ಯಾರತ ಮಲೆ	ಪಾಂಡಿ ಮಾದಯ್ಯ	1069·12
4161	ಡಿಟೋ	ಡಿಟೋ	ಕರಿಕೆ	ಐನಪಟ್ಟೆ ಮಲೆ	ಸಹಿಪ್ಲು ಮಹದೇವಯ್ಯ	394·51

ತಾರೀಖು 1ನೇ ಆಗಸ್ಟ್ ಸ್ರ 1876ನೇ ಇಸವಿ.

E. SHAW,
Offg. Supt.

ಸ್ರ 1876ನೇ ಇಸವಿ ಆಗಸ್ಟ್ ತಿಂಗಳ ಕಾಲಸ್ಥಿತೀ ರಿಪೋರ್ಟು.

ಬೆಂಗಳೂರು ಡಿಸ್ಟ್ರಿಕ್ಟು.

ಮಳೆ—ಆಗಸ್ಟ್ ತಿಂಗಳಲ್ಲಿ ಮಳೇಬಿದ್ದ ಸಂಗತೀಯಲ್ಲಿ ತಾಲ್ಲೂಕ್ ಜಾತಗಳಿಂದ ತಲ್ಪಿರುವ ರಿಪೋರ್ಟುಗಳು ಜುಲೈತಿಂಗಳಿಗಿಂತ ಬಹಳ ತೃಪ್ತಿಕರವಾಗಿರುತ್ತೆ, ಆದರೆ ಹವಾ ಬಹಳವಾಗಿ ಅಭಿವೃದ್ಧಿ ಹೊಂದಿದ್ದಾಗ್ಯೂ ಇನ್ನೂ ಮಳೆ ಅಗತ್ಯವಾಗಿ ಬೇಕಾಗಿರುತ್ತೆ, ಈ ತಿಂಗಳೊಳಗೆ 194 ದೊಡ್ಡ ಮತ್ತು 360 ಚಿಕ್ಕ ಕೆರೆಗಳಿಗೆ ನೀರು ಬಂದಿರುತ್ತೆ.

ಬೆಳೆ—ಬೆಳೆಗಳು ಸಾಧಾರಣವಾಗಿ ಚನ್ನಾಗಿವೆ, ನೆಲಮಂಗಲ ತಾಲ್ಲೂಕಿನ ಕೆಲವು ಪ್ರದೇಶಗಳಲ್ಲಿ ಮಾತ್ರ ಚನ್ನಾಗಿಲ್ಲವೆಂದು ರಿಪೋರ್ಟುಗಿರುತ್ತೆ. ಹುರಳಿ, ಕಾರ್ತೀಕದನೆಲ್ಲು, ಹುಚ್ಚೆಳ್ಳು, ಸಾವೆ, ಉದ್ದು, ಹೆಸರು, ಕಡ್ಲೆ ಬಿತ್ತಲ್ಪಟ್ಟವು; ಮತ್ತು ಅಚ್ಚೆಳ್ಳು, ವೈಶಾಖದನೆಲ್ಲು ಕಟುವಾದವು.

ಆರೋಗ್ಯ—ಸಾಧಾರಣವಾಗಿ ಚನ್ನಾಗಿರುತ್ತೆ. ನೆಲಮಂಗಲ, ಕಾನಖಾನಹಳ್ಳಿ, ಮಾಗಡೀ ತಾಲ್ಲೂಕುಗಳಲ್ಲಿ ಛಳೀಜ್ವರವೂ, ಮತ್ತು ಮುಖ್ಯವಾಗಿ ಆನೆಕಲ್ಲು ತಾಲ್ಲೂಕಿನಲ್ಲಿ ಖೈಜುಲಾಬ್ ಸಹ ವ್ಯಾಪಿಸಿತ್ತು. ನೆಲಮಂಗಲ, ಕಾನಖಾನಹಳ್ಳಿ, ಕ್ಯೂನಿಸೇಟೆ ತಾಲ್ಲೂಕುಗಳಲ್ಲಿ ಕೂಡಾ ಖೈಜುಲಾಬ್ ಸಂಭವಿಸಿತ್ತು.

ಮರಣ—486 ಮಂದಿ ಮೃತಪಟ್ಟರು, ಜುಲೈ ತಿಂಗಳಲ್ಲಿ 468 ಮಂದಿ ಮೃತಪಟ್ಟರು.

ಕಾಲ್ನಡೆ—ಈ ತಿಂಗಳೊಳಗೆ 1,751 ಹೋದವು, ಜುಲೈ ತಿಂಗಳಲ್ಲಿ 3,230 ಹೋದವು. ಈ ಸಂಖ್ಯೇ ಪೈಕೀ ಹೊಡ್ಡಬಳ್ಳಾಪುರತಾಲ್ಲೂಕಿನಲ್ಲಿ ಬಂದು ಮಾತ್ರ ಗೋಮಾರೀರೋಗದಿಂದ ಹೋಯಿತು, ಕಾಡುಮೃಗಗಳಿಂದ ಕೊಲ್ಲಲ್ಪಟ್ಟ ಜಾನ್ವರ ಸಂಖ್ಯೆಯು ಬಹಳವಾಗಿರುತ್ತೆ, 117 ಆಗಸ್ಟ್ತಿಂಗಳಲ್ಲಿಯೂ, 141 ಜುಲೈತಿಂಗಳಲ್ಲಿಯೂ ಜೋಗಿರುತ್ತೆ. ಕಾನಖಾನಹಳ್ಳಿ ತಾಲ್ಲೂಕಿನಲ್ಲಿ 72 ಮಾತ್ರ ಕೊಲ್ಲಲ್ಪಟ್ಟವು.

ಜಮ್ಮಾ—2,001–0–2 ರೂಪಾಯಿಗಳು ಕಂದಾಯವುಳ್ಳ ಜಮ್ಮಾ ಸಾಗುವಳೀಬಗ್ಯಾಗಿ ತೆಗದು ಕೊಳ್ಳಲ್ಪಟ್ಟವು.

L. RICKETTS,,
Offg. Dy. Commr.

ತುಮಕೂರು ಡಿಸ್ಟ್ರಿಕ್ಟು.

ಮಳೆ,—ಮಳೆ ಕೊಂಚವಾಗಿ ಆಯಿತು, 4 ಅಂಗುಲ 98 ಸೆಂಪ್ಟಿಗಳು ಹೆಡ್ ಕ್ವಾರ್ಟರ್‌ನಲ್ಲಿ ಅಳೆಯಲ್ಪಟ್ಟಿತು.

ಫಸಲ್‌ಗಳು,—ಜೋಳ, ಹರಳು, ಹುರಳಿ, ಎಳ್ಳು, ಭತ್ತ ಯಿವು ಸದರೀ ತಿಂಗಳಲ್ಲಿ ಪೇರಾವಾದವು ಮಳೆ ಯಿಲ್ಲದೆ ಖುಷ್ಕೀ ಫಸಲ್ ಬಣಗಿ ಹೋಯಿತು, ಮುಖ್ಯವಾಗಿ ಸೀರಾ, ಚಿಕ್ಕನಾಯಕನಹಳ್ಳಿ, ಕಡಬ, ಹೊನ್ನವಳ್ಳಿ ಈ ತಾಲ್ಲೂಕುಗಳೊಳಗೆ ಫಸಲ್ ಕೆಟ್ಟಿತು. ಬಾಗಾಯತು ಫಸಲ್‌ಗಳು ಗನ್ನ ಫಸಲ್ ಸಹ ಸಾಧಾರಣವಾಗಿದೆ, ಸದರೀ ತಿಂಗಳಲ್ಲಿ ಅಡಿಕೆ ತೆಂಗು ಫಲ ಕೀಳಲ್ಪಟ್ಟಿತು.

ಜನಾರೋಗ್ಯ,—ಕೆಲವರಿಗೆ ಉಖಾಲ್ ಜ್ವರಾಬ್ ತಗಲಿತು. ಡಿಸ್ಟ್ರಿಕ್ಟು ಕಸಬಾಗಳಲ್ಲಿ ಕೆಲವು ಮಟ್ಟಿಗೆ ಜ್ವರ ವ್ಯಾಪಿಸಿದೆ.

ದನಗಳು,—ಸದರೀ ತಿಂಗಳಲ್ಲಿ ಗೋಮಾರೀ ಯಿಂದಲೂ ಮೇವಿಲ್ಲದೆಯೂ ದನಗಳು ಬಹಳ ಹಲಾಕಾಯಿತು ಪರಂತು ಕಳೆದ ತಿಂಗಳಿಗಿಂತ ಕಡಮೆ ಅಂದರೆ ಜುಲೈ ತಿಂಗಳಿಗೆ 10143 ಕಾಲ್ನಡೆ ಹೋದವು. ಆಗಸ್ಟ್ನಲ್ಲಿ 7853 ಮಾತ್ರವೇ ಹೋಗಿರುತವೆ.

ಜಮಾನುಗಳು—ರೂ|| 3884—5—7 ಕಂದಾಯ ಬಾಳುವ ಜಮಾನುಗಳು ಸದರೀ ತಿಂಗಳಲ್ಲಿ ಸಾಗುವಳೀಗೆ ತೆಗದು ಕೊಳ್ಳಲ್ಪಟ್ಟಿತು.

ದಾರಣೆ—ಜೆಡಾವಾಇತು.

E. S. LUDLOW,
Offg. Dy. Commr.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಮಳೆ,—ಡಿಸ್ಟ್ರಿಕ್ಟು ಪೈಕೀ ಹೊನ್ನಾಳಿ ವಿನಾ ಮಿಕ್ಕ ಯಲ್ಲ ತಾಲ್ಲೂಕುಗಳಲ್ಲಿ ಸ್ವಲ್ಪವಾಗಿ ಮಳೆ ಬಿತ್ತು.

ಫಸಲ್‌ಗಳು,—ಮಲನಾಡ ತಾಲ್ಲೂಕುಗಳಲ್ಲಿ ಯೆಲ್ಲ ಫಸಲ್‌ಗಳೂ ಚನ್ನಾಗಿರುವಂತೆ ತಿಳಿಯಬರುತ್ತೆ ಆದರೆ ಸುಫಾರೀ ಫಸಲಿಗೆ ಸಾಗರ, ಕಾಲೇದುರ್ಗ ತಾಲ್ಲೂಕುಗಳಲ್ಲಿ ತಗಲಿ ಇದ್ದ ಕೊಳೆರೋಗ ಯಿನ್ನೂ ನಿವರ್ತಿ ಆಗಲಿಲ್ಲ ಹೊನ್ನಾಳಿ ತಾಲ್ಲೂಕಿನಲ್ಲಿ ಬೆಳೆಯೊಳಗಿದ್ದ ಕೆಲವು ಫಸಲ್‌ಗಳಿಗೆ ಹುಳು ತಗಲಿ ಯಿದೆ, ಚನ್ನಗಿರೀ ತಾಲ್ಲೂಕಿನಲ್ಲಿ ಮಳೆ ಯಿಲ್ಲದೆ ಫಸಲ್‌ಗಳು ಬಣಗುತ್ತಿದೆ.

ಜನಾರೋಗ್ಯ,—ಸದರೀ ಡಿಸ್ಟ್ರಿಕ್ಟಿನಲ್ಲಿ ಉಖಾಲ್ ಜ್ವರಾಬಿನ ವೃಪದ್ರವ ಇನ್ನೂ ಶಮನವಾಗಲಿಲ್ಲ, ಶಿವಮೊಗ್ಗಾ, ಹೊನ್ನಾಳೀ ಸೊರಬ, ಚನ್ನಗಿರಿ ಈ ತಾಲ್ಲೂಕುಗಳಲ್ಲಿ ಯಿನ್ನೂ ವ್ಯಾಪಿಸಿಯಿದೆ. ಕುಲ್ ಸದರೀ ತಿಂಗಳಿಗೆ 638 ಮಂದಿ ಹೋಗಿರುತ್ತಾರೆ. ಆ ಪೈಕೀ 179 ಮಂದಿ ಉಖಾಲ್ ಜ್ವರಾಬಿನಿಂದ ಹೋದರು ಈ ಸಂಖ್ಯೆ ಹೋದ ತಿಂಗಳಿಗಿಂತ 246 ಮಂದಿ ಕಮ್ಮಿಯಾಗಿರುತ್ತಾರೆ.

ಜನನ,—ಈ ತಿಂಗಳಲ್ಲಿ 489 ಜನನಗಳಾಗಿರುತವೆ.

ದನಗಳು,—ದನಗಳ ಪೈಕೀ 3667 ಕಾಲ್ನಡೆ ಹೋದವು ಈ ಪೈಕೀ ಬಹಳ ಮುಟ್ಟಿಗೆ ಮೇವಿಲ್ಲದೆ ಸತ್ತಿರುತವೆ.

ದಾರಣೆ,—ಹಿಂದಿನ ತಿಂಗಳಂತೆಯೇ ಯಿದೆ.

MAHOMED HUSEN BINTURI,
For Offg. Dy. Commr.

ಕೊಡಗು ಡಿಸ್ಟ್ರಿಕ್ಟು.

ತರೀಜಮ್ರ್ಮಾ—ತರೀ ಫಸಲ್ ನಾಟ್ಟ್ಣದ ಕೆಲಸ ಪೂರೈಸಿತು, ವೈಶಾಖೀ ಫಸಲ್ ಕಟುವು ಆಯಿತು.

ಖುಸ್ಕೀ ಜಮ್ರ್ಮಾ—ರಾಗೀ ಫಸಲ್ ಕುಯಿಲಿಗೆ ಬಂದಿದೆ.

ಇಲಾಚೀ—ಇಲಾಚೀ ಕಾಯಿಗಳು ಪಕ್ವಕ್ಕೆ ಬರುತಿದೆ, ಫಲ ಚನ್ನಾಗಿ ಆಗುವಂತೆ ಕಾಣಬರುತ್ತೆ.

ಕಾಫೀ—ಪ್ಲಾಟ್ಗಳಲ್ಲಿರುವ ಕೆಲವು ಕಾಫೀ ತೋಟಗಳು ಅತಿವರ್ಷದಿಂದ ಕೆಟ್ಟಿರುತವೆ, ಬಿಟ್ಟ ಕಾಯಿಗಳ ಪೈಕೀ ಕಾಲುವಾಸಿ ಕಾಲಾತಿ ಕ್ಯಮವಾಗಿ ಏಪ್ರಿಲ್ ಮೇ ತಿಂಗಳಲ್ಲಿ ಮಳೆ ಬಂದದರಿಂದ ಉದರಿ ಹೋದವಂತೆ ಉಳಿದ ಕಾಫೀ ಸಹ ನಿಸ್ಸತ್ವವಾದೀತೇನೋ ಯಂತ ಹೆದರುತ್ತಾರೆ, ಯಿತರಾಂಶದಲ್ಲಿ ತೋಟಗಳು ಅನುಕೂಲ ಸ್ಥಿತಿಯಲ್ಲೇ ಇರುತ್ತೆ, ಮಜ್ಜೂರೀದಾರು ವಿಶೇಷವಾಗಿ ಸಿಕ್ಕುವದರಿಂದ ಗಿಡಗಳು ನೆಡುವದು ಕಳೇ ಕೀಳುವದು ವಗೈರೇ ಕೆಲಸಗಳು ನಡೆಯಲಾರಂಭಿಸಿ ಯುಕ್ತ ಕಾಲಕ್ಕೆ ಪೂರ್ವವೇ ಪೂರೈಸಿತು.

ಜನಮರಣ—ಕುಲ್ 341 ಮಂದಿ ಹೋಗಿರುತ್ತಾರೆ ಕಳೆದ ಇಸವಿ ಯಿದೇ ತಿಂಗಳಲ್ಲಿ 462 ಮಂದಿ ಹೋದರು ಸದರೀ ನಂಬ್ರೆಗೆ ತಫ್ಸೀಲ್ ಹ್ಯಾಗಂದರೆ.

ಉಖಾಲ್‌ಜುಲಾಬಿನಿಂದ	..	6	ಮಡಿಕೆರೆತಾಲ್ಲೂಕು	..	84
ಅತಿಸಾರದಿಂದ	..	26	ಪಡಿನಾಲ್ಕುನಾಡು	..	54
ಜ್ವರದಿಂದ	..	295	ಯೆಡೆನಾಲ್ಕುನಾಡು	..	38
ಆಕಸ್ಮಿಕ	..	2	ಕಿಗ್ಗಟ್ಟ	..	29
ಇತರ ರೋಗಗಳು	..	11	ನಂಜರಾಜಪಟ್ಣ	..	67
ಕಾಡುಮೃಗಗಳಿಂದ	..	1	ಏಳುಸಾವಿರ ಸೀಮೆ	..	35
			ಪಹರ್		
ಕುಲ್		341	ಮಹದೇವಪೇಟೆ	..	16
			ವೀರರಾಜೇಂದ್ರಪೇಟೆ	..	18
			ಕುಲ್		341

ಈ ಪೈಕೀ 143 ಗಂಡುಸರು, 114 ಹೆಂಗಸರು, 84 ಮಕ್ಕಳು ಹೋದರು ಇವರ ಜಾತಿಗಳು, 7 ಮಂದಿ ಕ್ರಿಸ್ತರು, ಕೊಡಗರು 63, ತುರಕರು 19, ಹಿಂದುಗಳು 235, ಇತರ ಜಾತೀಯವರು 17 ಕುಲ್ 341 ಮಂದಿ.

ದನಗಳು—398 ಕಾಲ್ನಡೆ ಹೋದವು ಕಳೆದ ಇಸವಿ ಇದೇ ತಿಂಗಳಲ್ಲಿ 724 ಕಾಲ್ನಡೆ ಹೋಗಿರುತವೆ, ಎತ್ತುಗಳು 94, ಆಕಳು 72, ಕರುಗಳು 58, ಕೋಣಗಳು 38, ಎಮ್ಮೆಗಳು 24, ಎಮ್ಮೇ ಕರುಗಳು 112, ಕುಲ್ 398.

ದಾರಣೆ ತಗ್ಗುತಿದೆ.

ಮಳೆ—ಮಡಿಕೆರೆಯಲ್ಲಿ 1876ನೇ ಆಗಸ್ಟ್ಮರಲ್ಲಿ 26—85 ಕುಲ್ 97—49.

ಸೋಮವಾರ್ ಪೇಟೆ 1876ನೇ ಆಗಸ್ಟ್ಮರಲ್ಲಿ 15—63 ಕುಲ್ 93—89.

E. SHAW,
Offg. Supt.

ಅಮೃತ ಮಹಲ್.

ದನಗಳ ಮುಖ್ಯವಾದ ಹರಾಜು.

ಅಮೃತ ಮಹಲ್ ದನಗಳ ಬಾಬತು, ಬೀಜದ ಬಗ್ಗೆ ತಕ್ಕ ಕೆಲವು ಹೋರಿಗಳು, ಹನುವುಗಳು, ಕರುವುಗಳು, ಸಣ್ಣ ಯೆತ್ತುಗಳು ಯಿವುಗಳು ಸಹಿತ ಉಳಿದಿರುವ ಕಾಲ್ನಡೆ 1876ನೇ ಅಕ್ಟೋಬರ್ 26ನೇ ಮುಕ್ತಂ ಗುರುವಾರ ದಿನದಲ್ಲೂ ಆತರುವಾಯ ದಿನಗಳಲ್ಲೂ ಹುಣಸೂರಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

ಹರಾಜ್ ನಿಬಂಧನೆ—ನಗದು.

ಇದರಡಿ ರುಜು ಮಾಡತಕ್ಕವರನ್ನು ಕೇಳಿ ತಫಸೀಲ್ ತಿಳಿದುಕೊಳ್ಳಬಹುದು.

ಮು—ವಿ—50 ಜೊತೆ ಯೆತ್ತುಗಳು ಬಂಡಿಗೆ ತಯಾರ್ ಮಾಡಲ್ಪಡುವವು, ಮತ್ತು ಹೋರಿಗಳು ಜೊತೆಯಲ್ಲಿ ಹೋಗುವದಕ್ಕೆ ತಯಾರ್ ಮಾಡಲ್ಪಡುವವು.

CHAS. MCINROY, *Major*,
Sub-Asstt. Commissary Genl.,
In charge Amrut Mahal, by Mysore.

MYSORE GOVERNMENT PRESS, BANGALORE—1876.